ಓ.ಎಸ್.ನಂ.**313/2020**
ಪಿಡಬ್ಲ್ಯೂ .**1**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **14.11.2025.**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಯು.ಕೆ. ವಕೀಲರಿಂದ**

ಕರಾರು ಪತ್ರದಲ್ಲಿ ನಮೂದಿಸಿದ ಚೆಕ್ ಯಾರಿಗೆ ಸೇರಿದ್ದು ಎಂದರೆ ಸಾಕ್ಷಿಯು ನನ್ನ ಯಜಮಾನರಾದ ಲೋಕೇಶ್‌ಗೆ ಸೇರಿದ್ದು ಎಂದು ಹೇಳುತ್ತಾರೆ. ಸದರಿ ಚೆಕ್‌ಗಳು ನನ್ನ ಗಂಡನಿಗೆ ಸೇರಿದ್ದು ಎಂದು ಕರಾರುಪತ್ರದಲ್ಲಿ ಬರೆಸಿದ್ದೀರಾ? ಎಂದರೆ ಇಲ್ಲ. ನಿ.ಪಿ.**1** ರಲ್ಲಿ ಚೆಕ್‌ನ ದಿನಾಂಕವನ್ನು ನಮೂದಿಸಿದ್ದೀರಾ ಎಂದರೆ ಇಲ್ಲ. ಸದರಿ ಚೆಕ್‌ಗಳು ಕ್ರಾಸ್ ಚೆಕ್ ಆಗಿದ್ದು, **1**ನೇ ಪ್ರತಿವಾದಿಯ ಹೆಸರಿಗೆ ಕೊಟ್ಟಿರುತ್ತೇನೆ. ನಿಮ್ಮ ಗಂಡನ ಬ್ಯಾಂಕ್ ಖಾತೆಯಿಂದ **1**ನೇ ಪ್ರತಿವಾದಿಯ ಖಾತೆಗೆ ಹಣ ವರ್ಗಾವಣೆಯಾಗಿರುವ ಬಗ್ಗೆ ದಾಖಲೆ ಕೊಟ್ಟಿದ್ದೀರಾ ಎಂದರೆ ಹೌದು. ನಾನು ಹಾಜರುಪಡಿಸಿದ ನನ್ನ ಗಂಡನ ಬ್ಯಾಂಕ್ ಸ್ಟೇಟ್‌ಮೆಂಟ್ ನಲ್ಲಿ ಎಲ್ಲಿಯೂ ಕೂಡ **1**ನೇ ಪ್ರತಿವಾದಿಗೆ ಹಣ ವರ್ಗಾವಣೆಯಾಗಿಲ್ಲ ಎಂದರೆ ಸರಿಯಲ್ಲ. ನಿ.ಪಿ.**15** ನ್ನು ಸಾಕ್ಷಿಗೆ ತೋರಿಸಿ ಅದರಲ್ಲಿ ಎಲ್ಲಿ **1**ನೇ ಪ್ರತಿವಾದಿಗೆ ಹಣ ವರ್ಗಾವಣೆಯಾದ ಬಗ್ಗೆ ನಮೂದಾಗಿದೆ ಎಂದರೆ ಸಾಕ್ಷಿಯು ನನಗೆ ತಿಳಿಯುವುದಿಲ್ಲ ಎಂದು ಹೇಳುತ್ತಾರೆ. ನಿ.ಪಿ.**15** ನ್ನು ಯಾವ ಕಾರಣಕ್ಕಾಗಿ ಕೊಟ್ಟಿದ್ದೇನೆ ಎಂದರೆ ಗೊತ್ತಿಲ್ಲ. ಅದೇ ರೀತಿ ನನ್ನ ಮಾವನ ಬ್ಯಾಂಕ್ ಸ್ಟೇಟ್‌ಮೆಂಟ್‌ನ್ನು ಯಾವ ಕಾರಣಕ್ಕೆ ಕೊಟ್ಟಿದ್ದೇನೆ ಎಂದರೆ ಗೊತ್ತಿಲ್ಲ. ನಾನು ಹಾಜರುಪಡಿಸಿದ ನಿ.ಪಿ.**15** ರಿಂದ ನಿ.ಪಿ.**17** ರಲ್ಲಿ ದಿನಾಂಕಃ**04.04.2018** ರಲ್ಲಿ ಸದರಿ ಮೂರು ಜನರ ಖಾತೆಯಲ್ಲಿ ಎರಡು ಲಕ್ಷ ಹಣ ಇರಲಿಲ್ಲ ಎಂದರೆ ಸರಿಯಲ್ಲ. ನಾವು **1**ನೇ ಪ್ರತಿವಾದಿಗೆ ಕೇವಲ ಮೂರು ಲಕ್ಷದ ಇಪ್ಪತ್ತು ಸಾವಿರ ನಗದು ರೂಪದಲ್ಲಿ ಕೊಟ್ಟಿರುವುದನ್ನು ಹೊರತುಪಡಿಸಿ ಯಾವುದೇ ಚೆಕ್ ಮುಖಾಂತರ ಹಣ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಖಾತೆಯಿಂದ **1**ನೇ ಪ್ರತಿವಾದಿಯ ಖಾತೆಗೆ

ಯಾವುದೇ ಹಣ ವರ್ಗಾವಣೆಯಾಗದೇ ಇರುವುದರಿಂದ ಅದಕ್ಕೆ ಸಂಬಂಧಿಸಿದ ದಾಖಲೆಯನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಕರಾರು ಪತ್ರದ ಸಮಯದಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ಯಾವ ಯಾವ ಮೂಲ ದಾಖಲಾತಿಗಳನ್ನು ಪಡೆದುಕೊಂಡಿದ್ದೀರಾ? ಎಂದರೆ ಪಹಣಿ ಮತ್ತು ಮ್ಯೂಟೇಷನ್‌ನನ್ನು ನೋಡಿದ್ದೇವೆ ಹಾಗೂ ಜಿ.ಪಿ.ಎ.ಯನ್ನು ಪಡೆದುಕೊಂಡಿದ್ದೇವೆ. ನನ್ನ ಮತ್ತು ಪ್ರತಿವಾದಿಗಳ ನಡುವೆ ಯಾವುದೇ ಕ್ರಯದ ಕರಾರುಪತ್ರವಾಗಿಲ್ಲ, ಆದರೆ **1**ನೇ ಪ್ರತಿವಾದಿಯ ಮಗಳ ಮದುವೆ ಸಮಯದಲ್ಲಿ ನಾವು **3,20,000/–** ಸಾಲವನ್ನು ಕೊಟ್ಟು ಭದ್ರತೆಗಾಗಿ ಪತ್ರವನ್ನು ಬರೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.